# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 69/2024

**ಸಾಕ್ಷಿಯನ್ನು ದಿಃ 18.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಶೇಖರ್ | ಸಿಡಬ್ಲ್ಯೂಃ 6 | ಪಿಡಬ್ಲ್ಯೂಃ 5 |
| ತಂದೆಯ ಹೆಸರು | ಚಂದ್ರಯ್ಯ | | |
| ವಯಸ್ಸು | 37 ವರ್ಷ | | |
| ಕೆಲಸ | ಕೂಲಿ ಕೆಲಸ | | |
| ವಾಸಸ್ಥಳ | ಕಾಳೇಗೌಡನ ಕೊಪ್ಪಲು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾ–1, 4, 5 ಮತ್ತು 7 ಗೊತ್ತು. ಚಾಸಾ–2 ಮತ್ತು 3 ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದ್ದೇನೆ. (1, 5 ಮತ್ತು 8ನೇ ಆರೋಪಿ ಗೈರು ಹಾಜರಿದ್ದು, ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಅಂಗೀಕರಿಸಲಾಗಿದೆ). ಈ ಕೇಸಿಗೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ಹೇಳಿಕೆ ನೀಡಿದ್ದೇನೆ. ನಾನು ಚಾಸಾ–1 ರವರ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಚಾಸಾ–1 ರವರಿಗೆ ಬೀಜಗನಹಳ್ಳಿ ಗ್ರಾಮದಲ್ಲಿ ಜಮೀನು ಇದೆ. ದಿಃ 21.11.2023 ರಂದು ನಾನು ಮತ್ತು ಚಾಸಾ–7 ರವರು ಕೂಲಿ ಕೆಲಸಕ್ಕಾಗಿ ಚಾಸಾ–1 ರವರ ಬೀಜಗನಹಳ್ಳಿ ಗ್ರಾಮದ ಜಮೀನಿಗೆ ಬೆಳಿಗ್ಗೆ 8 ಗಂಟೆಗೆ ಹೋಗಿದ್ದೆವು. ಚಾಸಾ–1 ರವರ ಜೊತೆ ಬೇರೆ ಯಾರೋ ಇದ್ದರು ಅವರ ಹೆಸರು ಗೊತ್ತಿಲ್ಲ. ಅಲ್ಲಿ ತಂತಿ ಕಂಬ ನೆಡಲು ನಾವು ಹೋಗಿದ್ದೆವು. ಅಲ್ಲಿ ಟ್ರ್ಯಾಕ್ಟರ್ ನಿಂದ ಚಾಸಾ–5 ರವರ ಮೂಲಕ ಉಳುಮೆ ಮಾಡಿಸುತ್ತಿದ್ದರು. ಆಗ ಆರೋಪಿತರು ಅಲ್ಲಿಗೆ ಬಂದರು. ಉಳುಮೆ ಮಾಡಲು ಆರೋಪಿತರು ಬಿಡಲಿಲ್ಲ. ಟ್ರ್ಯಾಕ್ಟರ್ ಮುಂದೆ ಬಂದು ಮಲಗಿದರು. ಈ ಜಮೀನು ನಮಗೆ ಸೇರಿದ್ದು ಎಂದು ಆರೋಪಿತರು ಹೇಳುತ್ತಿದ್ದರು. ನಂತರ ನಾನು ಮನೆಗೆ ಬಂದೆ. ಆರೋಪಿತರು ಚಾಸಾ–4 ರವರಿಗೆ ಕೆಟ್ಟ ಕೆಟ್ಟ ಶಬ್ದಗಳಿಂದ ಏಕವಚನದಲ್ಲಿ ಬೈದರು. ಚಾಸಾ–

1 ರವರಿಗೂ ಕೂಡ ಕೆಟ್ಟ ಶಬ್ದಗಳಿಂದ ಬೈದರು. ದಿಃ 22.11.2023 ರಂದು ಹೇಳಿಕೆ ನೀಡಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 21.11.2023ರಂದು ನಾವು ಚಾಸಾ-1 ರವರ ಜಮೀನಿಗೆ ಹೋಗಿದ್ದಾಗ ಚಾಸಾ-1, 4, 8 ಮತ್ತು ಉಳುಮೆ ಮಾಡಲು ಟ್ರ್ಯಾಕ್ಟರ್ ತಂದಿದ್ದ ಚಾಸಾ-5 ರವರು ಇದ್ದರು ಎಂದರೆ ಸರಿ. ಆರೋಪಿತರೆಲ್ಲರೂ ಚಾಸಾ-1 ಮತ್ತು 4 ರವರಿಗೆ ಉಳುಮೆ ಮಾಡಲು ಬಿಡದೇ ಅವಾಚ್ಯ ಶಬ್ದಗಳಿಂದ ಸೂಳೆ ಮಗನೇ, ಬೋಳಿ ಮಗನೆ, ಮುಂಡೆ, ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ಆರೋಪಿತರೆಲ್ಲರೂ ಚಾಸಾ-1 ರವರ ಜಮೀನಿನ ಒಳಗೆ ನುಗ್ಗಿ ಚಾಸಾ-1 ಮತ್ತು 4ರವರನ್ನು ಅಡ್ಡಗಟ್ಟಿ, ತಳ್ಳಿ ಬೀಳಿಸಿ ಕೆಟ್ಟ ಮಾತುಗಳಿಂದ ಬೈದು, ನೀವು ಜಮೀನಿನ ಒಳಗ ಮತ್ತೆ ಬಂದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು ಎಂದರೆ ಸರಿ. ಆರೋಪಿತರು ಚಾಸಾ-5 ರವರಿಗೆ ಉಳುಮೆ ಮಾಡಲು ಬಿಡದೇ ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿ. ನಾನು ಚಾಸಾ-7 ಮತ್ತು 8 ರವರು ಪೋಲೀಸ್ ಠಾಣೆಗೆ ದೂರು ಕೊಡೋಣ ಎಂದು ಚಾಸಾ-1 ರವರನ್ನು ಸಮಾಧಾನ ಪಡಿಸಿ ಜಮೀನಿಂದ ಕರೆದುಕೊಂಡು ಬಂದೆವು ಎಂದರೆ ಸರಿ. ನಂತರ ವಿಚಾರ ಮಾಡಿದಾಗ, ಗಲಾಟೆ ಮಾಡಿದವರ ಹೆಸರು ಚಂದ್ರಶೇಖರ್, ಈರಣ್ಣೇಗೌಡ, ಕೆಂಡೇಗೌಡ, ಸಾಕಮ್ಮ, ಸಣ್ಣಮ್ಮ, ಮಲ್ಲಮ್ಮ, ಶಿವಮ್ಮ ಮತ್ತು ಅಭಿ ಅಲಿಯಾಸ್ ಬೀರೇಶ್ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಆದಿನ ಚಾಸಾ-1 ರವರ ಜಮೀನಿಗೆ ಅಕ್ರಮ ಪ್ರವೇಶ ಮಾಡಿದವರು ಈ ದಿನ ನ್ಯಾಯಾಲಯದ ಮುಂದೆ ಇದ್ದಾರೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. RKS ವಕೀಲರಿಂದಃ**

ಚಾಸಾ-1 ರವರು ನನಗೆ 2-3 ವರ್ಷಗಳಿಂದ ಪರಿಚಯ. ಚಾಸಾ-1 ರವರು ಜಮೀನಿನಲ್ಲಿ ತಂತಿ ಬೇಲಿ ಹಾಕುವ ಕೆಲಸಕ್ಕೆ ಕರೆದಿದ್ದರು. ದಿಃ 21.11.2023ರಂದು ಕೆಲಸಕ್ಕೆ ಕರೆದಿದ್ದರು. ನಾನು ಅದೇ ದಿನ ಮೊದಲಬಾರಿಗೆ ಅವರ ಜಮೀನಿಗೆ ಹೋಗಿದ್ದೆ.

ಪೋಲಿಸರು ನನಗೆ ನೋಟೀಸ್ ಕೊಟ್ಟಿಲ್ಲ. ಆರೋಪಿತರ ಜಮೀನು ಚಾಸಾ-1 ರವರ ಜಮೀನಿನ ಅಕ್ಕ-ಪಕ್ಕದಲ್ಲಿದೆ. ಈ ಹಿಂದೆ ಆ ಜಮೀನಿನಲ್ಲಿ ಯಾರು ಸ್ವಾಧೀನ ಇದ್ದರು ಎಂದು ಗೊತ್ತಿಲ್ಲ. ಸದರಿ ಜಮೀನು ಚಾಸಾ-1ರವರಿಗೆ ಹೇಗೆ ಬಂತು ಎಂದು ಗೊತ್ತಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಗೊತ್ತಿಲ್ಲ. ಚಾಸಾ-1 ರವರಿಗೆ ಯಾರು ಬೈದರು ಎಂದರೆ ಅಲ್ಲಿ ಬಂದಿದ್ದ ಹೆಂಗಸರು ಬೈದರು ಅವರ ಹೆಸರು ಗೊತ್ತಿಲ್ಲ. ಮುಖ ಪರಿಚಯ ಮಾತ್ರ ಇದೆ. ಗಲಾಟೆಯಾದ ಸ್ಥಳ ನಾನು ಕೆಲಸ ಮಾಡುತ್ತಿದ್ದ ಸ್ಥಳದ ಪಕ್ಕದಲ್ಲಿಯೇ ಇದೆ. ಕೊಲೆ ಬೆದರಿಕೆ ಹಾಕಿದ ವ್ಯಕ್ತಿಗಳ ಹೆಸರು ಗೊತ್ತಿಲ್ಲ. ಮುಖ ಪರಿಚಯ ಇದೆ. ಆ ಜಮೀನಿನಲ್ಲಿ ಪೂರ್ವಜರ ಕಾಲದಿಂದ ಆರೋಪಿತರೇ ಸ್ವಾದೀನದಲ್ಲಿದ್ದರು ಎಂದರೆ ಗೊತ್ತಿಲ್ಲ. ಚಾಸಾ-1 ರವರು ತಂತಿ ಕಂಬ ಹಾಕಲು ಮತ್ತು ಉಳುಮೆ ಮಾಡಲು ಬಂದಾಗ ಆರೋಪಿತರು ತಡೆದರು ಎಂದರೆ ಸರಿ. ಚಾಸಾ-1 ರವರೇ ಆರೋಪಿತರ ಸ್ವಾಧೀನಕ್ಕೆ ತೊಂದರೆ ಕೊಟ್ಟರು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲವಾಗಲೀ ಎಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು